ಸಿ. ಸಿ. ನಂ.- **1700/17**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- 21-03-2022 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಹೆಚ್.ಆರ್ ವಕೀಲರಿಂದ -

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಒಬ್ಬ ಗಂಡು ಮಗ ಮತ್ತು ಒಬ್ಬ ಹೆಣ್ಣುಮಗಳು ಮಕ್ಕಳಿದ್ದಾರೆ. ನನಗೆ 2008 ರಿಂದ ಯಾವುದೇ ಸ್ವಂತ ಭೂಮಿ ಇಲ್ಲ ಗುತ್ತಿಗೆ ಮಾಡುತ್ತೇನೆ. ನಿ.ಪಿ 8 ಮತ್ತು 9 ರಂತೆ ಭೂಮಿಗಳನ್ನು ನಾನು ನನಗೆ ಕಷ್ಟ ಇರುವುದಕ್ಕೆ ಮಾರಾಟ ಮಾಡಿದ್ದೇನೆಂದು ನಮೂದಿಸಿದ್ದೇನೆ ಎಂದರೆ ಸರಿ. ಪಾಲುವಿಭಾಗ ಪತ್ರದಲ್ಲಿ ನನಗೆ ಯಾವುದೇ ಭೂಮಿ ಬಂದಿಲ್ಲ ಎಂದರೆ ಬಂದಿದೆ. ಪಾಲುವಿಭಾಗ ಪತ್ರದಲ್ಲಿ ಶ್ರೀಮತಿ ಲತಾ, ಕೆ.ಸಿ ವೆಂಕಟೇಶ್, ಕೆ.ಸಿ ತಿಪ್ಪೆಸ್ವಾಮಿರವರಿಗೆ ಮಾತ್ರ ಪಾಲು ಬಂದಿರುತ್ತದೆ ಎಂದರೆ ಎಲ್ಲಾರಿಗೂ ಬಂದಿರುತ್ತದೆ. ಪಾಲುವಿಭಾಗ ಪತ್ರದಲ್ಲಿ ಇರುವುದೇ 3 ಹಿಸ್ಸಾ ಇದೆ ಎಂದರೆ ಸರಿ. ನಿ.ಪಿ 10 ರಂತೆ ದಿಃ 04-01-2017 ರಿಂದ 01-03-2017 ರವರೆಗೆ ನನ್ನ ಖಾತೆಯಲ್ಲಿ ಕೇವಲ 829 ಚಿಲ್ಲರೆ ಹಣ ಮಾತ್ರ ಇತ್ತು ಎಂದರೆ ಸರಿ. ನಿ.ಪಿ 10 ರಂತೆ ದಿಃ 31-07-2016 ರಿಂದ 31-10-2016 ರವರೆಗೆ ರೂ. 10 ಸಾವಿರಕ್ಕಿಂತ ಮೇಲ್ಪಟ್ಟು ಯಾವತ್ತಿಗೂ ಬ್ಯಾಂಕ್ ಬ್ಯಾಲೆನ್ಸ್ ಇಲ್ಲ ಎಂದರೆ ಸರಿ.

ನಾನು 5 ಎಕರೆ ಭೂಮಿಯನ್ನು 2008 ರಿಂದ ಗುತ್ತಿಗೆ ಮಾಡುತ್ತಿದ್ದೇನೆ. ಸದರಿ ಭೂಮಿಯ ಸರ್ವೆ ನಂಃ 617 ಮತ್ತು 618, ವೆಂಕಟಾಪುರ ಗ್ರಾಮ, ವಿಸ್ತೀರ್ಣ 7 ಎಕರೆ ಭೂಮಿಯನ್ನು ಗುತ್ತಿಗೆ ಮಾಡುತ್ತೇನೆ. ಗುತ್ತಿಗೆಯಂತೆ ಒಂದು ಬೆಳೆಗೆ ಎಕರೆಗೆ 10 ರಿಂದ 15 ಸಾವಿರ ಮಾಲೀಕರಿಗೆ ನೀಡಬೇಕಾಗುತ್ತದೆ. ಒಂದು ವರ್ಷಕ್ಕೆ ಒಂದೇ ಬೆಳೆ ಬರುತ್ತದೆ ಎಂದರೆ ಸರಿ. ಕಬ್ಬು ಹಾಕುತ್ತೇವೆ ಸರಬರಾಜು ಮಾಡಿದ ನಂತರ ಬ್ಯಾಂಕಿನವರು ಹಣ ನೀಡುತ್ತಾರೆ. ನಿ.ಪಿ 10 ಅದಕ್ಕೆ ಸಂಬಂಧಿಸಿದಂತೆ ಪಾಸ್ ಬುಕ್ ಆಗಿದೆ. ನಾನು ಗುತ್ತಿಗೆ ಮಾಡುವ ಭೂಮಿಯ ಮಾಲೀಕರ ಹೆಸರು ಸಮಿಉಲ್ಲಾ, ಕಮಲಾಪುರದವರು. ಆ ಬಗ್ಗೆ ಯಾವುದೇ ಪತ್ರವನ್ನು ಮಾಡಿಕೊಂಡಿರುವುದಿಲ್ಲ, ಬಾಯಿ ಮಾತಿನ ಮೂಲಕ ಆಗಿರುತ್ತದೆ. ನಾನು ಗುತ್ತಿಗೆ ಮಾಡುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ. ಸಿ. ನಂ.- **1700/17**

ಪಿ.ಡಬ್ಲ್ಯೂ. **1**

ಆರೋಪಿ ನನಗೆ **10-15** ವರ್ಷಗಳಿಂದ ಪರಿಚಯ ಇರುತ್ತಾರೆ. ಅವರು ನನಗೆ ಮಗನ ಸ್ನೇಹಿತ ಮತ್ತು ಅಂಗಡಿಗೆ ಹೋಗುತ್ತಿದ್ದೆ, ಬರುತ್ತಿದ್ದೆ ಆ ಮೂಲಕ ಪರಿಚಯ. ನಾನು ಆರೋಪಿಗೆ **10** ಲಕ್ಷಗಳನ್ನು ಸಾಲವನ್ನಾಗಿ ನೀಡುವಾಗ ಬೇರೆ ಯಾರು ಇರಲಿಲ್ಲ. ಅದನ್ನು ನಾನು ನನ್ನ ಮನೆಯಲ್ಲಿ ನೀಡಿರುತ್ತೇನೆ, ಆಗ ನನ್ನ ಮನೆಯವರು ಮಾತ್ರ ಇದ್ದರು. ನಾನು ಗದ್ದೆ ಮಾರಿ ಬಂದಿರುವ ದುಡ್ಡನ್ನು ಬೇರೆ ಗದ್ದೆ ಕೊಳ್ಳುವ ಉದ್ದೇಶದಿಂದ ಇಟ್ಟುಕೊಂಡಿದ್ದೆ ಅದನ್ನು ಆರೋಪಿಗೆ ನೀಡಿರುತ್ತೇನೆ. ಗುತ್ತಿಗೆಯಲ್ಲಿ ಖರ್ಚು ತೆಗೆದು ನನಗೆ **20** ರಿಂದ **25** ಸಾವಿರ ಉಳಿಯುತ್ತದೆ. ನನಗೆ ಗುತ್ತಿಗೆ ಆದಾಯ ಬಿಟ್ಟರೆ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿ. ನನ್ನ ಮಗ ಶಿಕ್ಷಕನಾಗಿ ಕೆಲಸಕ್ಕೆ ಹೋಗುತ್ತಾನೆ.

ದಿಃ **10-10-2016** ರಂದು ಆರೋಪಿ ನನಗೆ ಚೆಕ್ ನೀಡಿರುತ್ತಾರೆ. **10** ಲಕ್ಷ ಎಂದರೆ ನನಗೆ ಬಹಳ ದೊಡ್ಡ ಮೊತ್ತ ಎಂದರೆ ಸರಿ. ಸಾಲವನ್ನು ನೀಡುವಾಗ ನಾನು ಯಾವುದೇ ಪತ್ರವನ್ನು ಬರೆಸಿಕೊಂಡಿರುವುದಿಲ್ಲ, ವಿಶ್ವಾಸದ ಮೇಲೆ ನೀಡಿರುತ್ತೇನೆ. ಚೆಕ್ ನ್ನು ಆರೋಪಿ ನನ್ನ ಮುಂದೆ ಬರೆದಿರುತ್ತಾರೆ. ಚೆಕ್ ಮೇಲೆ ಇರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ನನ್ನ ಮುಂದೆ ಬರೆದಿರುತ್ತಾರೆ. ಐ.ಎನ್.ಜಿ ವೈಶ್ಯಾ ಬ್ಯಾಂಕ್ **2010** ರಲ್ಲಿ ಕೋಟಕ್ ಮಹೀಂದ್ರ ಎಂದು ಬದಲಾವಣೆಗೊಂಡಿತ್ತು ಎಂದರೆ ನಾನು ರೈತಾಪಿ ನನಗೆ ಗೊತ್ತಾಗುವುದಿಲ್ಲ ಅವರೇ ನೀಡಿರುತ್ತಾರೆ. ಆ ಕಾರಣ ಆರೋಪಿ ನನಗೆ ಸದರಿ ಚೆಕ್ ನೀಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸು ವ್ಯವಹಾರ ಆಗಿಲ್ಲ ಎಂದರೆ ಆಗಿದೆ. ಆ ಕಾರಣ ಪ್ರಕರಣದಲ್ಲಿ ಒಳಗೊಂಡ ಚೆಕ್ ನ್ನು ಆರೋಪಿ ನನಗೆ ನೀಡಿಲ್ಲ ಎಂದರೆ ನೀಡಿದ್ದಾರೆ. ಆರೋಪಿ ನನ್ನಿಂದ ಸಾಲವನ್ನು ತೆಗೆದುಕೊಂಡಿಲ್ಲ, ಆ ಕಾರಣ ಚೆಕ್ ನೀಡುವ ಪ್ರಮೇಯ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ **10** ಬ್ಯಾಂಕ್ ನ್ನು ಹೊರತುಪಡಿಸಿ ಬೇರೆ ಬ್ಯಾಂಕಿನಲ್ಲಿ ಸಹ ನಾನು ಖಾತೆಯನ್ನು ಹೊಂದಿದ್ದೇನೆ. ಆ ಪಾಸ್ ಬುಕ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಭೂಮಿ ಮಾರಾಟ ಮಾಡಿ ಉಳಿದ ಹಣ ಮತ್ತು ಗುತ್ತಿಗೆಯಿಂದ ಬಂದ ಹಣವನ್ನು ಮಕ್ಕಳ

ಮದುವೆಗೆ ಖರ್ಚು ಮಾಡಿರುತ್ತೇನೆ. ಸದರಿ ವಿವಾಹಗಳನ್ನು 1994, 1999 ರಲ್ಲಿ ಮಾಡಿರುತ್ತೇನೆ. ನಾನು ಸಾಲ ಮಾಡಿ ಭೂಮಿಯನ್ನು ಮಾರಿದ್ದರಿಂದ ಮತ್ತು ಬೇರೆ ಯಾವುದೇ ಆದಾಯದ ಮೂಲ ಇಲ್ಲದೆ ಇರುವುದರಿಂದ ಆರೋಪಿಗೆ ಸಾಲವನ್ನು ನೀಡುವ ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಎಂದರೆ ಭೂಮಿ ಮಾರಾಟ ಮಾಡಿ ಬಂದ ಹಣವನ್ನು ಸಾಲ ನೀಡಿರುತ್ತೇನೆ.

ಆರೋಪಿಯು ಆಗರ್ಭ ಶ್ರೀಮಂತ ಎಂದರೆ ಸರಿ. ಮೈನ್ ಬಜಾರ್ ನಲ್ಲಿ ಆರೋಪಿ ಬಂಗಾರದ ಅಂಗಡಿ ಹೊಂದಿದ್ದಾನೆ ಎಂದರೆ ಸರಿ. ಆರೋಪಿಗೆ 3 ಕಾರ್ ಇವೆ ಎಂದರೆ ಸರಿ. ಆರೋಪಿಗೆ ಇತರೆ ಖರ್ಚುಗಳು ಇಲ್ಲ ಎಂದರೆ ಸರಿ. ಆರೋಪಿಯ ಮನೆಗೆ ನಾನು ಯಾವತ್ತೂ ಹೋಗಿಲ್ಲ, ಅಂಗಡಿಗೆ ಹೋಗಿರುತ್ತೇನೆ. ಆರೋಪಿಯು 2 ರಿಂದ 3 ಕೋಟಿ ಬೆಲೆಬಾಳುವ ಮನೆಯನ್ನು ಹೊಂದಿದ್ದಾನೆ ಎಂದರೆ ಇರಬಹುದು. ಆರೋಪಿಗೆ ನನ್ನಿಂದ ಸಾಲವನ್ನು ಮಾಡುವ ಅವಶ್ಯಕತೆ ಬಿದ್ದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಾನು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ ದಂ.ಗಳು, ಹೊಸಪೇಟೆ.